ಪುಟ ಸಂಖ್ಯೆ

8. **ಶಾಸನ ರಚನೆ:** 396–837

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2006.
(ಪರ್ಯಾಲೋಚನೆ ಪ್ರಸ್ತಾವ ಅಂಗೀಕಾರ)

- ಡಾ॥ ಹೆಚ್.ಶಂಕರಮೂರ್ತಿ
  (ಉನ್ನತ ಶಿಕ್ಷಣ ಸಚಿವರು)
- ಶ್ರೀ ಮಲ್ಲಿಕಾರ್ಜುನ ಖರ್ಗೆ
- ಶ್ರೀ ಎ. ಕೃಷ್ಣಪ್ಪ
- ಶ್ರೀ ಜೆ.ಸಿ. ಮಾಧುಸ್ವಾಮಿ
- ಶ್ರೀ ಜಿ.ವಿ. ಶ್ರೀರಾಮರೆಡ್ಡಿ
- ಶ್ರೀ ಎಸ್. ರಾಜೇಂದ್ರನ್
- ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ
- ಶ್ರೀ ದಿನೇಶ್ ಗುಂಡೂರಾವ್
- ಶ್ರೀ ಕೆ. ಶ್ರೀನಿವಾಸಗೌಡ
- ಶ್ರೀ ಎಂ.ಬಿ. ಪಾಟೀಲ್
- ಶ್ರೀ ಕೆ.ಆರ್. ರಮೇಶ್‌ಕುಮಾರ್
- ಶ್ರೀ ಶಿವಾನಂದ ಎಸ್. ಪಾಟೀಲ್
- ಡಾ॥ ಎಂ. ಸುಧಾಕರ್
- ಶ್ರೀ ಎಸ್.ಕುಮಾರ ಬಂಗಾರಪ್ಪ
- ಶ್ರೀ ವೈಜನಾಥ್ ಪಾಟೀಲ್
- ಶ್ರೀ ಸಿ.ಬಿ. ಕೃಷ್ಣ ಬೈರೇಗೌಡ
- ಶ್ರೀ ಎಸ್.ಎಲ್.ಧರ್ಮೇಗೌಡ

* * * * * *

ಕರ್ನಾಟಕ ವಿಧಾನಸಭೆ

ಸೋಮವಾರ 3ನೇ ಏಪ್ರಿಲ್ 2006ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಮಧ್ಯಾಹ್ನ 12 ಗಂಟೆ 55 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರಾದ (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

1. ಸಂತಾಪ ಸೂಚನೆಗಳು:

ವಿಷಯ : ಶ್ರೀ ಹಂಜಿ ವೀರಭದ್ರಪ್ಪ ಹಾಗೂ ಶ್ರೀ ಗೋವಿಂದಪ್ಪ ಜುಟ್ಟಲ್ ಅವರ ನಿಧನ.

ಅಧ್ಯಕ್ಷರು: ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಹಂಜಿ ವೀರಭದ್ರಪ್ಪ ಹಾಗೂ ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಗೋವಿಂದಪ್ಪ ಹನುಮಂತಪ್ಪ ಜುಟ್ಟಿಲ್ ಅವರುಗಳು ನಿಧನ ಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ.

1. ಶ್ರೀ ಹಂಜಿ ವೀರಭದ್ರಪ್ಪ

ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಹಂಜಿ ವೀರಭದ್ರಪ್ಪ ಅವರು ತರೀಕೆರೆಯಲ್ಲಿ ಜನಿಸಿದ್ದು, ಚಲೇಜಾವ್ ಚಳವಳಿಯೂ ಸೇರಿದಂತೆ ಅನೇಕ ಸ್ವಾತಂತ್ರ್ಯ ಹೋರಾಟಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಕಾರಾಗೃಹ ವಾಸವನ್ನು ಅನುಭವಿಸಿದ್ದರು. ಶ್ರೀ ಹಂಜಿ ವೀರಭದ್ರಪ್ಪ ಅವರು 1945ರಲ್ಲಿ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 26.03.2006 ರಂದು ನಿಧನ ಹೊಂದಿದರು.

2. ಶ್ರೀ ಗೋವಿಂದಪ್ಪ ಹನುಮಂತಪ್ಪ ಜುಟ್ಟಲ

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಗೋವಿಂದಪ್ಪ ಹನುಮಂತಪ್ಪ ಜುಟ್ಟಲ ಅವರು 1950ನೇ ಜೂನ್ 1ರಂದು ಸವಣೂರು ತಾಲ್ಲೂಕಿನಲ್ಲಿ ಜನಿಸಿದ್ದು ಕೃಷಿಕರಾಗಿದ್ದರು. ಸಮಾಜ ಸೇವೆಯಲ್ಲಿ ಆಸಕ್ತಿ ಹೊಂದಿದ್ದ ಶ್ರೀಯುತರು ಧಾರವಾಡ ಜಿಲ್ಲಾ ವಾಲ್ಮೀಕಿ ನಾಯಕ ಸಂಘದ ಅಧ್ಯಕ್ಷರಾಗಿ, ಕುಂದಗೋಳ ತಾಲ್ಲೂಕು ಭೂ ಅಭಿವೃದ್ಧಿ ಮಂಡಳಿಯ ನಿರ್ದೇಶಕರಾಗಿ ಹಾಗೂ ಇನ್ನಿತರೆ ಹಲವಾರು ಸಂಘಟನೆಗಳ

ಪದಾಧಿಕಾರಿಗಳಾಗಿಯೂ ಕಾರ್ಯನಿರ್ವಹಿಸಿದ್ದರು. ಶ್ರೀ ಜುಟ್ಟಲ್ ಅವರು ಕುಂದಗೋಳ ಕ್ಷೇತ್ರದಿಂದ 9 ನೇ ವಿಧಾನ ಸಭೆಗೆ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 01.04.2006ರಂದು ನಿಧನ ಹೊಂದಿದರು.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು) : ಮಾನ್ಯ ಅಧ್ಯಕ್ಷರೆ, ಈ ಸಂತಾಪ ಸೂಚನೆಯನ್ನು ತಾವು ಶ್ರೀ ಹಂಜಿ ವೀರಭದ್ರಪ್ಪ ಹಾಗೂ ಶ್ರೀ ಗೋವಿಂದಪ್ಪ ಹನುಮಂತಪ್ಪ ಜುಟ್ಟಲ ಅವರ ನಿಧನದ ಬಗ್ಗೆ ಮಂಡಿಸಿದ್ದೀರಿ; ಅದಕ್ಕೆ ನಾನು ನನ್ನ ಸಂಪೂರ್ಣವಾದ ಬೆಂಬಲವನ್ನು ಸೂಚಿಸುತ್ತೇನೆ. ಒಂದು ಕಾಲದಲ್ಲಿ ಆ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಒಬ್ಬ ಮಾಜಿ ಸದಸ್ಯರಾಗಿ ಹಂಜಿ ವೀರಭದ್ರಪ್ಪನವರು ತಮ್ಮದೇ ಆದಂತಹ ಒಂದು ಸೇವೆಯನ್ನು ಮಾಡಿದರು. 'ಚಲೇ ಜಾವೋ ಚಳುವಳಿಯಲ್ಲಿ' ತಮ್ಮನ್ನು ತಾವೇ ತೊಡಗಿಸಿಕೊಂಡಿದ್ದರು. ಅಂತಹ ವ್ಯಕ್ತಿಯನ್ನು ಇವತ್ತು ಕಳೆದುಕೊಂಡು ಈ ನಾಡು ಬಡವಾಗಿದೆ ಎಂದು ನಾನಾದರೂ ಭಾವಿಸುತ್ತೇನೆ. ಅದೇ ರೀತಿ ಶ್ರೀ ಗೋವಿಂದಪ್ಪ ಹನುಮಂತಪ್ಪ ಜುಟ್ಟಲ ಅವರು ವಾಲ್ಮೀಕಿ ಜನಾಂಗದ ಸಂಘದ ಅಧ್ಯಕ್ಷರಾಗಿ ಇಡೀ ರಾಜ್ಯದಲ್ಲಿಯೇ ಆ ಸಮಾಜವನ್ನು ಎತ್ತಿ ಹಿಡಿಯುವುದಕ್ಕೋಸ್ಕರ ಹೋರಾಟವನ್ನು ಮಾಡಿಕೊಂಡು ಬಂದಂತಹ ಆ ವ್ಯಕ್ತಿ ಸಹ ಇವತ್ತು ದೈವಾಧೀನರಾಗಿದ್ದಾರೆ. ಇವರಿಬ್ಬರ ಆತ್ಮಕ್ಕೆ ಶಾಂತಿಯನ್ನು ಕೋರಿ ಅವರ ಕುಟುಂಬಕ್ಕೆ ಇವರ ಅಗಲಿಕೆಯನ್ನು ತಡೆದುಕೊಳ್ಳತಕ್ಕಂಥ ಶಕ್ತಿಯನ್ನು ಭಗವಂತ ಕೊಡಲಿ ಎಂದು ಪ್ರಾರ್ಥನೆ ಮಾಡಿ ನಾನು ಈ ಸಂತಾಪ ಸೂಚನೆಗೆ ನನ್ನ ದನಿಯನ್ನು ಕೂಡಿಸುತ್ತಿದ್ದೇನೆ.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು): ಮಾನ್ಯ ಹಂಜಿ ವೀರಭದ್ರಪ್ಪನವರು ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಈ ರಾಜ್ಯದ ಹಿರಿಯರು. 1945ರಲ್ಲಿ ಪ್ರಜಾಪ್ರಭುತ್ವ ಪ್ರತಿನಿಧಿಯ ಸದಸ್ಯರಾಗಿ ಕೆಲಸ ಮಾಡಿದ್ದಾರೆ. ಅವರ ನಿಧನದಿಂದ ಒಬ್ಬ ಸ್ವಾತಂತ್ರ್ಯ ಹೋರಾಟಗಾರರನ್ನು ಕಳೆದುಕೊಂಡಂತೆ ಆಗಿದೆ. ಶ್ರೀ ಗೋವಿಂದಪ್ಪ ಹನುಮಂತಪ್ಪ ಜುಟ್ಟಲ ಅವರು ನನ್ನ ಜೊತೆಗೆ ವಿಧಾನ ಸಭಾ ಸದಸ್ಯರಾಗಿದ್ದರು. ಅವರು ವಾಲ್ಮೀಕಿ ಸಮಾಜಕ್ಕೆ ಸಂಬಂಧಪಟ್ಟವರು. ಬಹಳ ಹೋರಾಟಗಾರರು ಮತ್ತು ವೀಶೇಷವಾಗಿ ಆ ಭಾಗದಲ್ಲಿ ಮತ್ತು ಜಿಲ್ಲಾ ವಾಲ್ಮೀಕಿ ಸಂಘದ ಅಧ್ಯಕ್ಷರಾಗಿ ಕೂಡ ಸಾಕಷ್ಟು ಕೆಲಸ ಮಾಡಿದ್ದಾರೆ. ಅವರು ಮಾಡಿದಂತಹ ಹಲವಾರು ಸಭೆಗಳಿಗೆ ನಾನು ಹೋಗಿ ಬಂದಿದ್ದೇನೆ. ಅವರಿಗೆ ಒಂದು ಹಾರ್ಟ್ ಪ್ರಾಬ್ಲಮ್ ಆಗಿತ್ತು. ನನಗೆ ಬಹಳ ತೊಂದರೆ ಆಗುತ್ತಿದೆ ಎಂದು ಅವರು ಹೇಳುತ್ತಿದ್ದರು. ಅವರು ಇವತ್ತು ನಿಧನ ಹೊಂದಿದ್ದಾರೆ. ಅದಕ್ಕೆ ನಮ್ಮ ಆ ಭಾಗದ ಜನರಿಗೆ ವಿಶೇಷವಾಗಿ ವಾಲ್ಮೀಕಿ ಜನರಿಗೆ ಒಂದು ತರಹದ ನೋವಾಗಿದೆ.

ಅದಕ್ಕೆ ನಾನೂ ಸಹ ನೋವನ್ನು ವ್ಯಕ್ತಪಡಿಸುತ್ತೇನೆ. ಹಂಜಿ ವೀರಭದ್ರಪ್ಪನವರು ಹಾಗೂ ಶ್ರೀ ಹನುಮಂತಪ್ಪ ಜುಟ್ಟಲ ಅವರ ಕುಟುಂಬಕ್ಕೆ ತಮ್ಮ ಮುಖಾಂತರ ಈ ಸಭೆಯ ಒಂದು ಸಂತಾಪವನ್ನು ತಿಳಿಸುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಅಧ್ಯಕ್ಷರೆ, ಶ್ರೀಮಾನ್ ಗೋವಿಂದಪ್ಪ ಹನುಮಂತಪ್ಪ ಜುಟ್ಟಲ ಅವರು ಮತ್ತು ಹಂಜಿ ವೀರಭದ್ರಪ್ಪನವರು ನಿಧನರಾಗಿದ್ದಕ್ಕೆ ಏನು ಸಂತಾಪ ಸೂಚನಾ ನಿರ್ಣಯವನ್ನು ತಂದಿದ್ದೀರಿ ಅದರ ಪರವಾಗಿ ನಾನೂ ಕೂಡ ಸಂತಾಪವನ್ನು ಸೂಚಿಸುತ್ತಾ ಅವರ ಆತ್ಮಕ್ಕೆ ಶಾಂತಿ ಸಿಗಲಿ. ಅವರ ಮನೆಯವರಿಗೆ ಈ ದುಃಖವನ್ನು ಭರಿಸುವ ಶಕ್ತಿಯನ್ನು ಕೊಡಲಿ ಎಂದು ಹಾರೈಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ. ಈ ಸದನದ ಸದಸ್ಯರಾಗಿದ್ದಂಥವರು ಶ್ರೀಮಾನ್ ಹಂಜಿ ವೀರಭದ್ರಪ್ಪನವರು ಹಾಗೂ ಶ್ರೀ ಗೋವಿಂದಪ್ಪ ಹನುಮಂತಪ್ಪ ಜುಟ್ಟಲ ಇವರ ನಿಧನದಿಂದ ತುಂಬಲಾಗದಂತಹ ನಷ್ಟ ಆಗಿದೆ. ಈ ನಷ್ಟವನ್ನು ಸರಿಪಡಿಸಲು ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇನೆ. ಶಾಂತಿಕೋರುವುದರ ಜೊತೆಗೆ ತಮಗೆ ನಾನು ಬಹಳ ಸಾರಿ ಮನವಿಯನ್ನು ಮಾಡಿಕೊಂಡಿದ್ದೇನೆ. ಒಂದು ಸಮಿತಿಯನ್ನು ತಾವು ರಚನೆ ಮಾಡಬೇಕು. ಈ ರೀತಿ ಮಾಜಿ ಶಾಸಕರು ತೀರಿಕೊಂಡಾಗ ಸಂತಾಪ ಸೂಚನಾ ನಿರ್ಣಯ ಕಳುಹಿಸುವುದರ ಜೊತೆಗೆ ಅವರ ಮನೆಯ ಪರಿಸ್ಥಿತಿ ನೋಡಿ ಸರ್ಕಾರದಿಂದ ಏನು ಸಹಾಯ ಮಾಡಬಹುದು, ಅವರ ಮುಂದಿನ ಭವಿಷ್ಯದ ಬಗ್ಗೆ ಏನು ಮಾಡಬಹುದೆಂಬ ಬಗ್ಗೆ ಒಂದು ಸದನದ ಸಮಿತಿ ರಚಿಸಬೇಕು. ಈ ಬಗ್ಗೆ ನಾನು ಅತ್ಯಂತ ಕಳಕಳಿಯಿಂದ ಮಾನ್ಯ ಮುಖ್ಯಮಂತ್ರಿಗಳಲ್ಲಿ ಮತ್ತು ಉಪ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು: ಈ ಬಗ್ಗೆ ನಾನು ಆಗಲೇ ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರ ಮಂತ್ರಿಗಳಲ್ಲಿ ವಿನಂತಿಸಿಕೊಂಡಿದ್ದೇನೆ.

ಶ್ರೀ ವಾಟಾಳ್ ನಾಗರಾಜ್: ಜೊತೆಗೆ, ನಾನು ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರಲ್ಲಿ ಮನವಿ ಮಾಡುತ್ತಿದ್ದೇನೆ. ಪ್ರಾಮಾಣಿಕವಾಗಿ ಹೇಳುವುದಾದರೆ, ಇವೊತ್ತು ಅನೇಕ ಮಾಜಿ ಶಾಸಕರುಗಳು ಬಹಳ ತೊಂದರೆಯಲ್ಲಿದ್ದಾರೆ. ಜೀವನ ನಿರ್ವಹಣೆ ಮಾಡುವುದಕ್ಕೂ ಆಗದ ರೀತಿಯಲ್ಲಿ ತೊಂದರೆಯಲ್ಲಿದ್ದಾರೆ. ಅವರು ಅಷ್ಟು ತೊಂದರೆಯಲ್ಲಿರುವಾಗ ಯಾರ್ಯಾರು ಯಾವ್ಯಾವ ತಾಲ್ಲೂಕುಗಳಲ್ಲಿ ಯಾವ್ಯಾವ ಕ್ಷೇತ್ರಗಳಲ್ಲಿ ಏನೇನು ಕೆಲಸ-ಕಾರ್ಯಗಳನ್ನು ಮಾಡಿದ್ದಾರೆ, ಅವರ ಪರಿಸ್ಥಿತಿಗಳೇನು ಎಂಬುದರ ಸಮಗ್ರ ಮಾಹಿತಿಗಳನ್ನು ಸರ್ಕಾರದವರಾದ ತಾವು ತರಿಸಿಕೊಳ್ಳುವ ಮೂಲಕ, ಇವರುಗಳ ಬಗ್ಗೆ ನಿಮ್ಮ ಕಾಲದಲ್ಲಾದರೂ

ಏನಾದರೂ ಕನಿಷ್ಠ ಸಹಾಯ ಮಾಡಬೇಕು. ತೊಂದರೆಯಲ್ಲಿರುವ ಮಾಜಿ ಶಾಸಕರುಗಳಿಗೆ ಕನಿಷ್ಠ ಇಷ್ಟು ನೆರವು, ಸಹಾಯ ಮಾಡುತ್ತೇವೆಂಬ ಪ್ರಾಮಾಣಿಕ ಪ್ರಯತ್ನವನ್ನು ತಾವು ಮಾಡಬೇಕೆಂದು ತಮ್ಮ ಮೂಲಕ ಮತ್ತೊಮ್ಮೆ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತಾ ಈ ಸಂತಾಪ ಸೂಚನಾ ನಿರ್ಣಯ ತಂದಿರುವುದಕ್ಕೆ ನನ್ನ ಬೆಂಬಲ ಸೂಚಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, ಗೋವಿಂದಪ್ಪ ಹನುಮಂತಪ್ಪ ಜುಟ್ಟಲರವರು ಕುಂದಗೋಳ ತಾಲ್ಲೂಕಿನ ಮತಕ್ಷೇತ್ರದಿಂದ ಶಾಸಕರಾಗಿ ಆರಿಸಿ ಬಂದಿದ್ದರು. ಉತ್ತಮ ಸಂಘಟನೆ ಮಾಡುವಂಥ ಮತ್ತು ಸಮಾಜದ ಬಗ್ಗೆ ಹೆಚ್ಚು ಕಳಕಳಿ ಇದ್ದಂಥ, ಹಿಂದುಳಿದ ವರ್ಗದಿಂದ ಬಂದಂಥ ವ್ಯಕ್ತಿ ಕೂಡ ಅವರಾಗಿದ್ದರೆ. ಆ ಒಂದು ಸಮಾಜದ ಸಂಘಟನೆ ಮಾಡಿ, ಇವೊತ್ತು ಹಿಂದುಳಿದ ವರ್ಗದಲ್ಲಿ ಒಂದು ಭಾವನೆ ಮೂಡಿಸಿದಂಥ ವ್ಯಕ್ತಿ ಶ್ರೀ ಗೋವಿಂದಪ್ಪ ಹನುಮಂತಪ್ಪ ಜುಟ್ಟಲರವರು. ಅವರು ಶಾಸಕರಾಗಿ ಸಹ ಉತ್ತಮ ಕೆಲಸ ಮಾಡಿದ್ದರು. ಅದೇ ರೀತಿ ಶ್ರೀ ಹಂಜಿ ವೀರಭದ್ರಪ್ಪನವರು ಸಾಮಾಜಿಕ ಕಾರ್ಯಗಳಲ್ಲಿ ಯಾವಾಗಲೂ ಮುಂದೆ ಇರುವಂಥ ವ್ಯಕ್ತಿಯಾಗಿದ್ದರು. ನಿಧನರಾಗಿರುವ ಈ ಇಬ್ಬರೂ ವ್ಯಕ್ತಿಗಳು ಇವೊತ್ತು ನಮ್ಮ ಮಧ್ಯದಲ್ಲಿಲ್ಲ. ಇವರುಗಳ ಆತ್ಮಕ್ಕೆ ನಾನು ಶಾಂತಿ ಕೋರುತ್ತಿದ್ದೇನೆ ಮತ್ತು ತಾವು ಏನು ಸಂತಾಪ ಸೂಚನೆ ತಂದಿದ್ದೀರಿ, ಅದಕ್ಕೆ ನಾನು ಬೆಂಬಲ ವ್ಯಕ್ತಪಡಿಸುತ್ತಿದ್ದೇನೆ.

ಶ್ರೀ ಚಿಕ್ಕನಗೌಡ್ರ ಸಿದ್ಧನಗೌಡ ಈಶ್ವರಗೌಡ (ಕಲಘಟಗಿ): ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಮೊದಲು ತಮಗೆ ಧನ್ಯವಾದಗಳನ್ನು ಹೇಳುತ್ತಾ, ತಾವು ತಂದಿರುವ ಸಂತಾಪ ಸೂಚನಾ ನಿರ್ಣಯಕ್ಕೆ ನನ್ನ ಬೆಂಬಲ ಕೊಟ್ಟು ಶ್ರೀ ಹಂಜಿ ವೀರಭದ್ರಪ್ಪ ಮತ್ತು ಶ್ರೀ ಗೋವಿಂದಪ್ಪ ಹನುಮಂತಪ್ಪ ಜುಟ್ಟಲರವರು ನಿಧನರಾಗಿದ್ದಾರೆ. ಶ್ರೀ ಗೋವಿಂದಪ್ಪ ಹನುಮಂತಪ್ಪ ಜುಟ್ಟಲರವರು ನಮ್ಮ ಕ್ಷೇತ್ರದ ಪಕ್ಕದ ಗ್ರಾಮದವರು. ಸವಣೂರು ತಾಲ್ಲೂಕಿನಲ್ಲಿ ಜನಿಸಿದ್ದರೂ ನಮಗೆ ಅತ್ಯಂತ ಹತ್ತಿರದವರಾಗಿದ್ದರು. ಕುಂದಗೋಳ ತಾಲ್ಲೂಕಿನಿಂದ ಹುಬ್ಬಳ್ಳಿಗೆ ಹೋಗಬೇಕಾದರೆ ನಮ್ಮ ಕ್ಷೇತ್ರದ ಮಾರ್ಗವಾಗಿಯೇ ಹಾದುಹೋಗುತ್ತಿದ್ದರು. ನನಗೆ ಎಲ್ಲಿಯೋ ದಾರಿಯಲ್ಲಿ ಭೇಟಿಯಾದರೂ ಅವರು ಪ್ರೀತಿ, ಕಳಕಳಿಯಿಂದ ಮಾತನಾಡಿಸುತ್ತಿದ್ದಂಥ ಒಬ್ಬ ನಾಯಕರಾಗಿದ್ದರು. ಇವೊತ್ತು ಅವರು ನಮ್ಮನ್ನು ಅಗಲಿದ್ದಾರೆ. ಅವರು ನಮ್ಮನ್ನು ಬಿಟ್ಟು ಅಗಲಿದಂಥ ಸಂದರ್ಭದಲ್ಲಿ ನನಗೆ ಬಹಳ ದುಃಖವಾಗುತ್ತದೆ. ಏಕೆಂದರೆ, ಒಬ್ಬ ನಾಯಕರು ಅದರಲ್ಲೂ ವಾಲ್ಮೀಕಿ ಸಮಾಜದ ನಾಯಕರು ಎಂದರೆ, ಕಲಘಟಗಿ ತಾಲ್ಲೂಕಿಗಷ್ಟೇ ಅಲ್ಲ, ಧಾರವಾಡ ಜಿಲ್ಲೆಯಲ್ಲಷ್ಟೇ ಅಲ್ಲ, ಇಡೀ ರಾಜ್ಯಾದ್ಯಂತ ಹೆಸರು ಪಡೆದ ಒಬ್ಬ ಮಹಾನ್ ನಾಯಕರಾಗಿದ್ದರು.

ಅಂತಹ ಒಬ್ಬ ನಾಯಕರನ್ನು ಇವೊತ್ತು ನಾವು ಕಳೆದುಕೊಂಡಿದ್ದೇವೆ. ಅವರಿಗೆ ನಾಲ್ಕು ಜನ ಗಂಡು ಮಕ್ಕಳಿದ್ದಾರೆ. ಇವೊತ್ತು ಅವರೆಲ್ಲರೂ ದೇಶಪ್ರೇಮಿಗಳಾಗಿ ಕೆಲಸ–ಕಾರ್ಯಗಳನ್ನು ಮಾಡುತ್ತಿದ್ದಾರೆ. ಮೊನ್ನೆ ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯಿತಿಗೆ ಜರುಗಿದ ಚುನಾವಣೆಯಲ್ಲಿ ಅವರು ಬರೀ ಕುಂದಗೋಳ ತಾಲ್ಲೂಕಿಗಷ್ಟೆ ಸೀಮಿತವಾಗಿ ಕೆಲಸ ಮಾಡಲಿಲ್ಲ. ಇಡೀ ಧಾರವಾಡ ಜಿಲ್ಲೆಯಲ್ಲಿ ಅವರದೇ ಆದ ಒಂದು ಪಕ್ಷದ ಸಲುವಾಗಿ ನಿರಂತರವಾಗಿ, ಪ್ರಾಮಾಣಿಕವಾಗಿ ಕೆಲಸ–ಕಾರ್ಯಗಳನ್ನು ಮಾಡಿದಂಥ ವ್ಯಕ್ತಿ ಅವರಾಗಿದ್ದರು. ಅಂತಹ ಒಬ್ಬ ನಾಯಕರನ್ನು ಕಳೆದುಕೊಂಡಿರುವುದು ಬಹಳ ದುಃಖಕರ ಸಂಗತಿಯಾಗಿದೆ. ದೇವರು ಅವರ ಆತ್ಮಕ್ಕೆ ಮತ್ತು ಅವರ ಕುಟುಂಬ ವರ್ಗದವರಿಗೆ ಶಾಂತಿ ಕೊಡಲೆಂದು ಹಾರೈಸುತ್ತಾ ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ದಿವಂಗತರಾದ ಶ್ರೀ ಹಂಜಿ ವೀರಭದ್ರಪ್ಪ ಮತ್ತು ಶ್ರೀ ಗೋವಿಂದಪ್ಪ ಹನುಮಂತಪ್ಪ ಜುಟ್ಟಲ ಅವರುಗಳಿಗೆ ಗೌರವ ಸೂಚಿಸುವ ಸಲುವಾಗಿ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಕಾಲ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ಅಧ್ಯಕ್ಷರು: ಈ ಸದನವು ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.

2. ಅಧ್ಯಕ್ಷರ ಅಪ್ಪಣೆ ಮೇರೆಗೆ:

(ಅ) ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ವ್ಯಾಟ್ 2ನೇ ತಿದ್ದುಪಡಿ) ವಿದೇಯಕ–2006ರ ಬಗ್ಗೆ ಮಂತ್ರಿಗಳು ವಿವರಣೆ ನೀಡದಿರುವುದು.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು): ಮಾನ್ಯ ಸಭಾಧ್ಯಕ್ಷರೆ, ಮೊನ್ನೆ ಸದನದಲ್ಲಿ ಒಂದು ಅಹಿತಕರವಾದ ಘಟನೆ ನಡೆದಿದೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಕರ್ನಾಟಕದ ಜನತೆಯ ಸಮಸ್ಯೆಗಳನ್ನು ವಿಚಾರ ಮಾಡತಕ್ಕಂಥ ಸದನ ಇದಾಗಿದೆ. ತಾವು ಅಧ್ಯಕ್ಷರಾಗಿದ್ದೀರಿ. ಈ ಸದನದಲ್ಲಿ ಪ್ರಸ್ತಾಪವಾಗತಕ್ಕಂಥ ಎಲ್ಲಾ ಸಮಸ್ಯೆಗಳಿಗೂ ಇವೊತ್ತು ಸ್ಪಷ್ಟೀಕರಣ ಕೊಡತಕ್ಕಂಥಾದ್ದಾಗಲಿ, ಉತ್ತರ ಕೊಡತಕ್ಕಂಥಾದ್ದಾಗಲಿ, ಸರ್ಕಾರ ವಿರೋಧ ಪಕ್ಷದ ಸದಸ್ಯರುಗಳಿಗೆ ಕೊಡಬೇಕಾಗುತ್ತದೆ. ಪ್ರಸ್ತುತ ಸರ್ಕಾರ ಏನಿದೆ. ಇದು ಬಂದ ನಂತರ ಈ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಪಕ್ಷದವರಾದ ನಾವೆಲ್ಲರೂ ವಿರೋಧ ಪಕ್ಷದಲ್ಲಿದ್ದೇವೆ. ಇವೊತ್ತು ಮಾನ್ಯ ಸಭಾ ನಾಯಕರು ಸದನದಲ್ಲಿದ್ದಾರೆ.